**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 404/2021**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಚಂದ್ರುರಾಠೋಡ.**

**ದೋಷಾರೋಪಣೆ**

| | |
|---|---|
| **ಆರೋಪಿ 1.** | ಚಂದ್ರುರಾಠೋಡ ತಂದೆ ಸೇವಾನಾಯಕ<br>ವಃ 35 ವರ್ಷ,<br>ಉಃ ಜೆ.ಸಿ.ಬಿ ಚಾಲಕ, ಸಾಃ ಗೊಂದಳ್ಳಿ ತಂಡಾ<br>ತಾಃ ಶಹಾಪೂರ ಜಿಃ ಯಾದಗಿರಿ. |
| **2.** | ಶ್ರೀಧರರೆಡ್ಡಿ ತಂದೆ ರವಿಂದ್ರರೆಡ್ಡಿ<br>ವಃ 27 ವರ್ಷ,<br>ಉಃ ಒಕ್ಕಲುತನ, ಸಾಃ ಶಟ್ಟಿಹಳ್ಳಿ<br>ತಾಃ ಮತ್ತು ಜಿಃ ಯಾದಗಿರಿ. |

ದಿನಾಂಕಃ 19-03-2021 ರಂದು ಬೆಳಗಿನಜಾವಾ 06-10 ಗಂಟೆಟೆ ಸೈದಾಪೂರ ಪೋಲಿಸ ಠಾಣೆಯ ಹದ್ದಿಯಲ್ಲಿ ಬರುವ ಶಟ್ಟಿಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿತರಾದ ನೀವು ಜೆ.ಸಿ.ಬಿ ನಂ.ಕೆಎ-36 ಎನ್-8896 ನೇದ್ದರಲ್ಲಿ ಕಳ್ಳತನದಿಂದ ಮರಳು ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದು, ಈ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.379 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಆರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಮಾರಾಟ ಮಾಡುವ ಸಲುವಾಗಿ ಕಳ್ಳತನದಿಂದ ಜೆ.ಸಿ.ಬಿ.ಯಿಂದ ಮರಳನ್ನು ತುಂಬುವದನ್ನು ಪ್ರಯತ್ನಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 511 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **21-11-2023**
ಸ್ಥಳ ಃ ಯಾದಗಿರಿ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**